ಪಕ್ಷಿಗಳ ಚಿಲಿಪಿಲಿಗೆ, ಗಾಳಿಗೆ ತೊಯ್ದಾಡುವ ಹಸಿರು ಹೊತ್ತ ಮರಗಳಿಗೆ, ಎಲ್ಲೆಲ್ಲೂ ಬಿರಿದ ಮನಮೋಹಕ ಹೂಗಳ ಸುಗಂಧವನ್ನು ಹೊತ್ತು ಮೆರೆದಾಡುತ್ತಿರುವ ಗಾಳಿಯನ್ನು ಸೇವಿಸಿ ಆಹ್ಲಾದಪಡುವ ಮನಃಸ್ಥಿತಿಯಲ್ಲಿ ಜಿಮ್ಮಿ ಇರಲಿಲ್ಲ. ಮೊತ್ತಮೊದಲು ಅವನು ಒಂದು ಒಳ್ಳೆಯ ಹೋಟೆಲಿಗೆ ನುಗ್ಗಿದ. ಬೇಯಿಸಿದ ಕೋಳಿ, ಬಿಳಿ ವೈನ್ ಮತ್ತು ವಾರ್ಡನ್ ಕೊಟ್ಟ ಸಿಗಾರಿಗಿಂತ ಉತ್ತಮ ದರ್ಜೆಯ ಸಿಗಾರನ್ನು ಸೇದಿ ತನ್ನ ಬಿಡುಗಡೆಯ ಸಂಭ್ರಮವನ್ನು ಆಚರಿಸಿದ. ಅಲ್ಲಿಂದ ಅವನು ನೇರವಾಗಿ ರೈಲು ನಿಲ್ದಾಣಕ್ಕೆ ಹೊರಟ. ಹ್ಯಾಟನ್ನು ಒಡ್ಡಿ ಭಿಕ್ಷೆ ಬೇಡುತ್ತಿದ್ದ ಕುರುಡ ಭಿಕ್ಷುಕನಿಗೆ ಕಾಲು ಡಾಲರನ್ನು ಎಸೆದು ರೈಲು ಹತ್ತಿದ. ಮೂರು ಗಂಟೆಗಳ ಪ್ರಯಾಣದ ನಂತರ ಅವನು ಒಂದು ಸಣ್ಣ ಊರಿನಲ್ಲಿ ಇಳಿದು ನೇರವಾಗಿ ಮೈಕ್ ಡೊಲನ್ ಕೆಫೆಗೆ ಹೋಗಿ ಅದರ ಮಾಲೀಕ ಮೈಕ್‌ನನ್ನು ಭೇಟಿಯಾದ. ಬಾರ್ ಕೌಂಟರಿನ ಹಿಂದೆ ಇದ್ದ ಮೈಕ್ ಹೊರಬಂದು ಅವನ ಕೈಕುಲುಕಿದ.

'ಇದಕ್ಕೂ ಮೊದಲು ನಿನ್ನನ್ನು ಬಿಡಿಸಿಕೊಳ್ಳಲಾಗಲಿಲ್ಲ ಜಿಮ್. ಕ್ಷಮಿಸು. ಗವರ್ನರನೂ ಹೆದರಿದ. ಹೇಗಿದ್ದೀಯಾ?'

'ಫೈನ್. ನನ್ನ ಕೀ?'

ಕೀಯನ್ನು ತೆಗೆದುಕೊಂಡು ಜಿಮ್ಮಿ ಮಹಡಿಯನ್ನು ಹತ್ತಿ, ಕಾರಿಡಾರಿನ ಕೊನೆಯ ರೂಮಿಗೆ ಪ್ರವೇಶಿಸಿದ. ರೂಮು ಅವತ್ತು ಹೇಗಿತ್ತೋ ಹಾಗೆಯೇ ಇತ್ತು. ಒಂದು ಕಡ್ಡಿಯೂ ಆಚೀಚೆ ಅಲ್ಲಾಡಿರಲಿಲ್ಲ. ಅವನನ್ನು ಇದೇ ರೂಮಿನಲ್ಲಿ ಡಿಟೆಕ್ಟಿವ್ ಬೆನ್ ಪ್ರೈಸ್ ಅರೆಸ್ಟ್ ಮಾಡಿದ್ದ. ಜಿಮ್ಮಿ ಸಾಕಷ್ಟು ಪ್ರತಿರೋಧಿಸಿದ್ದ. ಕೈಕೈ ಮಿಲಾಯಿಸಿದಾಗ ಪ್ರೈಸ್‌ನ ಶರ್ಟಿನ ಗುಂಡಿ ಕಿತ್ತು ಬಿದ್ದಿದ್ದು ಅದಿನ್ನೂ ಅಲ್ಲಿಯೇ ಇತ್ತು.

ಗೋಡೆಯಲ್ಲಿ ಹೊರಗೆ ಕಾಣದ ಗುಪ್ತ ಗೂಡೊಂದು ಇತ್ತು. ಜಿಮ್ಮಿ ಅದನ್ನು ತೆರೆದು, ದೂಳಿನಲ್ಲಿ ಮಿಂದಿದ್ದ ಒಂದು ಸೂಟುಕೇಸನ್ನು ಹೊರತೆಗೆದು ತೆರೆದ. ಅವನ ಕಣ್ಣುಗಳು ಹೊಳೆದವು. ಆ ಕ್ಷೇತ್ರದಲ್ಲಿ ಯಾರ ಬಳಿಯೂ ಇರದ, ಸೇಫು, ಬೀಗ ತೆರೆಯುವ ವಿವಿಧ ಹತ್ಯಾರಗಳು ಅವನ ಬಳಿ ಇದ್ದವು. ವಿಶೇಷವಾದ ಉಕ್ಕಿನಲ್ಲಿ ತಯಾರಿಸಿದ್ದ ಡ್ರಿಲ್ಲುಗಳು, ಪಂಚ್‌ಗಳು, ವಿವಿಧ ನಮೂನೆಯ ಸ್ಕ್ರೂಡ್ರೈವರ್‌ಗಳು, ಸ್ಪ್ಯಾನರುಗಳು... ಇತ್ಯಾದಿ ಅಲ್ಲಿದ್ದವು. ಕೆಲವನ್ನು ಅವನೇ ತಯಾರಿಸಿದ್ದ. ಇವಕ್ಕೆಂದೇ ಜಿಮ್ಮಿ ಒಂಬೈನೂರು ಡೊಲ್ಲರುಗಳನ್ನು ವ್ಯಯಿಸಿದ್ದ.

ಅರ್ಧಗಂಟೆಯೊಳಗೆ ಜಿಮ್ಮಿ ರೂಮಿನಿಂದ ಹೊರಬಿದ್ದ. ಅವನ ಉಡುಗೆ ಬದಲಾಗಿತ್ತು. ಕೈಯಲ್ಲಿ ಸ್ವಚ್ಛಗೊಳಿಸಿದ ಸೂಟ್‌ಕೇಸ್ ಇತ್ತು.

'ಯಾವುದಾದರೂ ಹೊಸ ಯೋಜನೆ ಜಿಮ್?' ಡೊಲನ್ ಕೇಳಿದ.

'ನೀನು ತಪ್ಪು ತಿಳಿದಿದ್ದೀಯಾ ಮೈಕ್! ಯಾವ ಯೋಜನೆಯೂ ಇಲ್ಲ. ನಾನೀಗ 'ನ್ಯೂಯಾರ್ಕ್ ಅಮಾಲ್ಗಮೇಟೆಡ್ ಬಿಸ್ಕಿಟ್ ಕಂಪನಿ'ಯ ಮಾರಾಟ ಪ್ರತಿನಿಧಿ.'

ಅವನ ಉತ್ತರದಿಂದ ಮೈಕ್ ಎಷ್ಟು ಖುಷಿಯಾದನೆಂದರೆ, ಜಿಮ್ಮಿಗೆ ಒಂದು ಲೋಟ ಬಿಸಿ ಬಿಸಿ ಹಾಲನ್ನು ಹುಯ್ದು ಕೊಟ್ಟ! ಜಿಮ್ಮಿ ಮದ್ಯವನ್ನು ಮುಟ್ಟುತ್ತಿರಲಿಲ್ಲ.

ಜಿಮ್ಮಿ ವ್ಯಾಲೆಂಟಿನ್ ಬಿಡುಗಡೆಯಾದ ಒಂದು ವಾರದಲ್ಲೇ ಇಂಡಿಯಾನಾದ ರಿಚ್ಮಂಡ್‌ನಲ್ಲಿ ಯಾರೋ ಒಂದು ಸೇಫನ್ನು ದೋಚಿದರು. ಇದು ಯಾರ ಕೃತ್ಯವೆಂದು ಗೊತ್ತಾಗಲೇ ಇಲ್ಲ. ಎರಡು ವಾರಗಳ ನಂತರ ಲೋಗನ್ ಸ್ಪೋರ್‌ನಲ್ಲಿ ಮತ್ತೊಂದು. ಇದೊಂದು ಅತ್ಯಾಧುನಿಕ